## ಜಿಲ್ಲಾ ಮತ್ತು ಸತ್ರ ನ್ಯಾಯಾಲಯ, ಕೊಡಗು, ಮಡಿಕೇರಿ

## ಎಂವಿಸಿ ಸಂಖ್ಯೆ: **4/2021**

PW-1

## ಸಾಕ್ಷಿಯನ್ನು ಪ್ರಮಾಣೀಕರಿಸಿದ ದಿನಾಂಕ: **16.04.2022**

ಮುಖ್ಯವಿಚಾರಣೆ ಅರ್ಜಿದಾರರ ಪರ ಶ್ರೀ ಎಂ.ಇ.ಎಂ, ವಕೀಲರಿಂದ:

ನನ್ನ ಮುಖ್ಯ ವಿಚಾರಣೆಯ ವಿಷಯವಾಗಿ ನಾನು ನ್ಯಾಯಾಲಯದಲ್ಲಿ ಪ್ರಮಾಣಪತ್ರವನ್ನು ಸಲ್ಲಿಸಿದ್ದು, ಅದರಲ್ಲಿ ಬರೆದ ವಿಷಯಗಳನ್ನು ಓದಿಸಿ ತಿಳಿದುಕೊಂಡಿದ್ದು, ಆ ವಿಷಯ ಸರಿ ಹಾಗೂ ಸತ್ಯವಾಗಿರುತ್ತವೆ ಅಂತ ಒಪ್ಪಿ ಪ್ರಮಾಣಪತ್ರಕ್ಕೆ ನನ್ನ ಸಹಿ ಮಾಡಿರುತ್ತೇನೆ.

2. ಈ ಪ್ರಕರಣದಲ್ಲಿ ನಾನು ದೂರು, ಪ್ರಥಮ ವರ್ತಮಾನ ವರದಿ, ಸ್ಥಳ ಮಹಜರ್, ಶವ ಪರೀಕ್ಷಾ ವರದಿ, ವಾಹನ ತಪಾಸಣಾ ವರದಿ ಹಾಗೂ ಅಂತಿಮ ವರದಿ ಇವುಗಳ ನಿಜಪ್ರತಿಗಳನ್ನು ಹಾಜರುಪಡಿಸಿದ್ದು, ಅವುಗಳನ್ನು ಕ್ರಮವಾಗಿ ನಿಪಿ-**1** ರಿಂದ **6** ಎಂದು ಗುರುತಿಸಲಾಯಿತು.

**(ವಕೀಲರ ವಿನಂತಿಯ ಮೇರೆಗೆ ಮುಂದಿನ ಮುಖ್ಯವಿಚಾರಣೆಯನ್ನು ಮುಂದೂಡಲಾಯಿತು.)**

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ

**ಸಾಕ್ಷಿಯನ್ನು ದಿನಾಂಕ 21.11.2022 ರಂದು ಪುನಃ ಕರೆಯಿಸಿ ಪ್ರಮಾಣ ವಚನ ಭೋಧಿಸಲಾಯಿತು.**

**ಮುಂದುವರೆದ ಮುಖ್ಯವಿಚಾರಣೆ ಅರ್ಜಿದಾರರ ಪರವಾಗಿ ಶ್ರೀ ಎಂ.ಇ.ಎಂ. ವಕೀಲರಿಂದಃ**

3. ನನ್ನ ಮಗನಾದ ಸುಧಾಕರ ರವರಿಗೆ ಸಂಬಂಧಿಸಿದ ಚಾಲನಾ ಪರವಾನಗಿಯ ದೃಢೀಕೃತ ನಕಲನ್ನು ಹಾಜರು ಮಾಡಿದ್ದು ಅದನ್ನು ನಿಪಿ-7 ಎಂದು ಗುರುತಿಸಿದೆ.

ಆದಕಾರಣದಿಂದ ಪ್ರಾರ್ಥನೆಯಂತೆ ಈ ಪ್ರಕರಣವನ್ನು ಮಾನ್ಯ ಮಾಡಬೇಕು ಮತ್ತು ನನಗೆ ಪರಿಹಾರವನ್ನು ನೀಡಬೇಕು ಎಂಬುದಾಗಿ ಪ್ರಾರ್ಥಿಸುತ್ತೇನೆ.

**ಪಾಟೀಸವಾಲು 1 ನೇ ಎದುರುದಾರರ ಪರವಾಗಿ ಶ್ರೀ ಟಿ.ಹೆಚ್.ಎ. ವಕೀಲರಿಂದಃ**

ಮಾನ್ಯ ವಕೀಲರು ಹಾಜರಿದ್ದಾರೆ ಮತ್ತು ಯಾವುದೇ ಪಾಟೀಸವಾಲು ಇಲ್ಲ ಎಂದು ನುಡಿದಿದ್ದಾರೆ.

**ಪಾಟೀಸವಾಲು 2 ನೇ ಎದುರುದಾರರ ಪರವಾಗಿ ಶ್ರೀ ಎಂ.ಎಂ.ಕೆ. ವಕೀಲರಿಂದಃ**

ಮಾನ್ಯ ವಕೀಲರು ಹಾಜರಿದ್ದಾರೆ ಮತ್ತು ಯಾವುದೇ ಪಾಟೀಸವಾಲು ಇಲ್ಲ ಎಂದು ನುಡಿದಿದ್ದಾರೆ.

**ಪಾಟೀಸವಾಲು 3 ನೇ ಎದುರುದಾರರ ಪರವಾಗಿ ಶ್ರೀ ಪಿ.ಟಿ.ಜಿ. ವಕೀಲರಿಂದಃ**

4. ಅಪಘಾತವನ್ನು ನಾನು ನೋಡಿರುವುದಿಲ್ಲ. ಈ ಅಪಘಾತವು ಓರ್ವ ಅಬ್ದುಲ್ ಸಮೀರ್ ಎಂಬುವವರ ತಪ್ಪಿನಿಂದ ಸಂಭವಿಸಿದೆ ಎಂದರೆ ಸರಿ.

5. ಅಪಘಾತದ ಸಮಯದಲ್ಲಿ ನನ್ನ ಮಗನು ಚಾಲನೆ ಮಾಡುತ್ತಾ ಇದ್ದ ಮೋಟಾರ್ ಸೈಕಲಿಗೆ ವಿಮಾ ಪಾಲಿಸಿಯನ್ನು 3 ನೇ ಎದುರುದಾರರು ನೀಡಿದ್ದರು ಎಂದರೆ ಸರಿ.

6. ನನ್ನ ಮಗನಿಗೆ ದ್ವಿಚಕ್ರ ವಾಹನವನ್ನು ಚಾಲನೆ ಮಾಡಲು ಅನುಮತಿ ನೀಡುವಂತಹ ಚಾಲನಾ ಪರವಾನಗಿಯು ಇತ್ತು.

7. ಅಬ್ದುಲ್ ಸಮೀರ್ ರವರು ಚಾಲನೆ ಮಾಡುತ್ತಾ ಇದ್ದ ಮೋಟಾರ್ ಸೈಕಲಿಗೆ ವಿಮಾ ಪಾಲಿಸಿಯನ್ನು ನೀಡಿರುವಂತಹ ವಿಮಾ ಕಂಪನಿಯು ನನಗೆ ಪರಿಹಾರವನ್ನು ಕೊಡಲು ಜವಾಬ್ದಾರರು ಆಗಿದ್ದಾರೆ ಮತ್ತು 3 ನೇ ಎದುರುದಾರರು ಪರಿಹಾರವನ್ನು ಕೊಡಲು ಜವಾಬ್ದಾರರು ಆಗಿರುವುದಿಲ್ಲ ಎಂದರೆ ಸರಿ.

8. ಅಬ್ದುಲ್ ಸಮೀರ್ ರವರು ಚಾಲನೆ ಮಾಡುತ್ತಾ ಇದ್ದ ಮೋಟಾರ್ ಸೈಕಲಿಗೆ ಒಂದು ವೇಳೆ ವಿಮಾ ಪಾಲಿಸಿಯು ಇಲ್ಲದೇ ಇದ್ದ ಪಕ್ಷದಲ್ಲಿ ಆ ಮೋಟಾರ್ ಸೈಕಲಿನ ಮಾಲೀಕರು ಪರಿಹಾರವನ್ನು ಕೊಡಬೇಕಾಗುತ್ತದೆ ಎಂದರೆ ಸರಿ.

9. ಪ್ರತಿ ತಿಂಗಳು ನನ್ನ ಮಗನು 30,000/- ರೂಪಾಯಿಗಳನ್ನು ಸಂಪಾದನೆ ಮಾಡುತ್ತಾ ಇದ್ದನು ಮತ್ತು ನನ್ನ ಮಗನ ಅಕಾಲಿಕ ಮರಣದಿಂದ ನನಗೆ ಸುಮಾರು 25 ಲಕ್ಷ ರೂಪಾಯಿಗಳಷ್ಟು ಪರಿಹಾರ ಬರಬೇಕಾಗಿದೆ ಎಂಬುದಾಗಿ ನಾನು ಸುಳ್ಳು ಸಾಕ್ಷ್ಯವನ್ನು ನುಡಿಯುತ್ತಾ ಇದ್ದೇನೆ ಎಂದರೆ ಸುಳ್ಳು.

<u>ಮರುವಿಚಾರಣೆಃ</u> ಇಲ್ಲ.

(ನನ್ನ ಉಕ್ತಲೇಖನದಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಲಾಯಿತು)

ಓ. ಹೇ. ಕೇ. ಸರಿ ಇದೆ.

ಸಹಿ/-
ಪ್ರಧಾನ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ಕೊಡಗು, ಮಡಿಕೇರಿ